# ಕರ್ನಾಟಕ ವಿಧಾನ ಪರಿಷತ್ತು

1) **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 600**

2) **ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ**

3) **ಉತ್ತರಿಸುವ ದಿನಾಂಕ : 14.08.2025**

4) **ಉತ್ತರಿಸುವ ಸಚಿವರು : ಗೃಹ ಸಚಿವರು**

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ 2013 ರನ್ವಯ ಪೊಲೀಸ್ ಇಲಾಖೆಯ KSISF (ISD) ರಲ್ಲಿ ಕಲ್ಯಾಣ ಕರ್ನಾಟಕದ ಭಾಗದಲ್ಲಿ ಸರ್ಕಾರಿ ಆದೇಶಗಳ ಮೇರೆಗೆ HC ಹುದ್ದೆಗಳ ಲಭ್ಯತೆ ಇದ್ದರೂ ಈ ಹುದ್ದೆಗಳನ್ನು 2019 ರಿಂದ 2024 ರವರೆಗೆ ಒಟ್ಟು 7 ಸಲ PC to HC ಹುದ್ದೆಗಳಿಗೆ ಮಾಡಿದ ಮುಂಬಡ್ತಿಯಲ್ಲಿ ಹಂಚಿಕೆ ಮಾಡದೇ ಇರಲು ಕಾರಣಗಳೇನು;</td><td>ಭಾರತದ ಸಂವಿಧಾನದ ಅನುಚ್ಛೇದ 371(ಜೆ) ಅನುಷ್ಠಾನಕ್ಕೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಕಾಲಕಾಲಕ್ಕೆ ಸರ್ಕಾರವು ಹೊರಡಿಸಿರುವ ನಿರ್ದೇಶನಗಳ್ವಯ ಕೆ.ಎಸ್.ಐ.ಎಸ್.ಎಫ್ ಘಟಕವು ಬೆಂಗಳೂರಿನಲ್ಲಿದ್ದರಿಂದ ಹೆಚ್.ಸಿ ಹುದ್ದೆಗೆ ಒಟ್ಟು ಮಂಜೂರಾದ ಹುದ್ದೆಗಳಲ್ಲಿ ಶೇ 8% ರಷ್ಟು ಹುದ್ದೆಗಳನ್ನು ಹೈ-ಕ ಸ್ಥಳೀಯ ಹುದ್ದೆಗಳಲ್ಲಿ ಗುರುತಿಸಲಾಗಿದೆ. ಸದರಿ ಗುರುತಿಸಿದ ಮೀಸಲಾತಿಗೆ ಅನುಗುಣವಾಗಿ 2019 ರಿಂದ 2024 ರವರಗೆ ಪಿ.ಸಿ (ಕೆ.ಎಸ್.ಐ.ಎಸ್.ಎಫ್) ಹುದ್ದೆಯಿಂದ ಹೆಚ್.ಸಿ (ಕೆ.ಎಸ್.ಐ.ಎಸ್.ಎಫ್) ರಿಕ್ತ ಹುದ್ದೆಗೆ ಈ ಕೆಳಕಂಡಂತೆ ಮುಂಬಡ್ತಿ ನೀಡಲಾಗಿರುತ್ತದೆ.
<table>
<tr><th>ಕ್ರಮ ಸಂಖ್ಯೆ</th><th>ಪಿಸಿ ವೃಂದದಿಂದ ಹೆಚ್‌ಸಿ ವೃಂದಕ್ಕೆ ಮುಂಬಡ್ತಿ ನೀಡುವ ದಿನಾಂಕ</th><th>ಹೆಚ್‌ಕೆ<br>8%</th><th>ನಾನ್ ಹೆಚ್‌ಕೆ<br>92%</th><th>ಒಟ್ಟು ಹುದ್ದೆಗಳು</th></tr>
<tr><td>1</td><td>26/07/2019</td><td>30</td><td>342</td><td>372</td></tr>
<tr><td>2</td><td>06/01/2020</td><td>2</td><td>24</td><td>26</td></tr>
<tr><td>3</td><td>14/10/2020</td><td>1</td><td>20</td><td>21</td></tr>
<tr><td>4</td><td>25/08/2021</td><td>7</td><td>55</td><td>62</td></tr>
<tr><td>5</td><td>20/02/2023</td><td>0</td><td>2</td><td>2</td></tr>
<tr><td>6</td><td>02/08/2023</td><td>0</td><td>1</td><td>1</td></tr>
<tr><td>7</td><td>27/02/2024</td><td>0</td><td>1</td><td>1</td></tr>
<tr><td colspan="2">ಒಟ್ಟು</td><td>40</td><td>445</td><td>485</td></tr>
</table></td></tr>
<tr><td>ಆ)</td><td>KSISF (ISD)ನಡಿ ಕಾರ್ಯ ನಿರ್ವಹಿಸುತ್ತಿರುವ ಕಲ್ಯಾಣ ಕರ್ನಾಟಕದ ಸಿಬ್ಬಂದಿಗಳು ತಮಗಾದ ಅನ್ಯಾಯವನ್ನು KAT ಪೀಠದಲ್ಲಿ ದಾವೆ ಹಾಕಿದ್ದು, ಅರ್ಜಿ ಸಂಖ್ಯೆ 3432 ರಿಂದ 3488/2024 ಆದೇಶದಲ್ಲಿ ಪೂರ್ವ ಅನ್ವಯವಾಗಿ ಈ ಹುದ್ದೆಗಳನ್ನು ಹಂಚಿಕೆ ಮಾಡಿ ಮುಂಬಡ್ತಿ ಮಾಡಲು ಆದೇಶಿಸಿದೆ: ಆದರೆ, ಇಲ್ಲಿಯವರೆಗೂ ಪೂರ್ವ ಅನ್ವಯವಾಗಿ ಈ ಹುದ್ದೆಗಳ ಹಂಚಿಕೆ ಮಾಡದೆ ಇರಲು ಕಾರಣಗಳೇನು;</td><td>ಮಾನ್ಯ ಕೆ.ಎಸ್.ಎ.ಟಿ ಬೆಂಗಳೂರು ಅರ್ಜಿ ಸಂಖ್ಯೆ:3432-3488/2024 ಕುರಿತು ದಿ:31-08-2024 ರ ಆದೇಶದಂತೆ ಈ ಪ್ರಕರಣದ ಕುರಿತು ಅಧಿಸೂಚನೆ ಸಂಖ್ಯೆ:06/ಸಿಬ್ಬಂದಿ/ಕೆ.ಎಸ್.ಐ.ಎಸ್.ಎಫ್/ಐ.ಎಸ್.ಡಿ/2024, ದಿ:16-12-2024 ರಲ್ಲಿ ಹೆಚ್.ಸಿ (ಕೆ.ಎಸ್.ಐ.ಎಸ್.ಎಫ್) ಹುದ್ದೆಗೆ ಹೈ-ಕ ಮೀಸಲಾತಿಯನ್ನು ಕಲ್ಪಿಸಿ ಆದೇಶಿಸಲಾಗಿದೆ ಮತ್ತು ಆದೇಶ ಸಂಖ್ಯೆ:06/ಸಿಬ್ಬಂದಿ/ಕೆ.ಎಸ್.ಐ.ಎಸ್.ಎಫ್/ಐ.ಎಸ್.ಡಿ/2024 ದಿನಾಂಕ:05-02-2025 ರಲ್ಲಿ ಪಿ.ಸಿ ಹುದ್ದೆಯಿಂದ ಹೆಚ್.ಸಿ ಹುದ್ದೆಗೆ ಮುಂಬಡ್ತಿ ನೀಡಲಾಗಿರುತ್ತದೆ.<br><br>ಈ ಪ್ರಕರಣದಲ್ಲಿ ಮಾನ್ಯ ಕೆ.ಎಸ್.ಎ.ಟಿ, ಬೆಂಗಳೂರಿನ ದಿನಾಂಕ:31-08-2024ರ ಆದೇಶವನ್ನು ಅನುಷ್ಠಾನ ಗೊಳಿಸಿರುವುದಿಲ್ಲ ಎಂದು ನ್ಯಾಯಾಂಗ ನಿಂಧನೆ ಅರ್ಜಿ ಸಂಖ್ಯೆ:537-593/2024 ದಾಖಲಾಗಿದ್ದು. ದಿನಾಂಕ:28-05-2025ರ ಆದೇಶದಲ್ಲಿ ನ್ಯಾಯಾಂಗ ನಿಂದನೆ ಅರ್ಜಿಯನ್ನು ಮಾನ್ಯ ನ್ಯಾಯಾಲಯವು ಅರ್ಜಿದಾರರ ಮನವಿಯನ್ನು ಪರಿಗಣಿಸಲು ನಿರ್ದೇಶನ ನೀಡಿ ಇತ್ಯರ್ಥಗೊಳಿಸಿದೆ.</td></tr>
<tr><td>ಇ)</td><td>ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈ.ಕ ಮೀಸಲಾತಿ) ಆದೇಶ 2013 ಈ ನಿಯಮಗಳು ವಿಶೇಷ ನಿಯಮಗಳು ಆಗಿವೆ: ಈ ನಿಯಮಗಳಂತೆ ಕಲ್ಯಾಣ ಕರ್ನಾಟಕದ</td><td>ಸಿಬ್ಬಂದಿ ಆಡಳಿತ ಸುಧಾರಣೆ ಇಲಾಖೆಯ ಸಂಖ್ಯೆ:ಸಿ.ಆ.ಸು.ಇ 178 ಹೈಕಕೋ 2024, ದಿನಾಂಕ:09/01/2025 ರಲ್ಲಿನ ಹಿಂಬರಹದಂತೆ, ಸರ್ಕಾರದ ಪತ್ರ ಸಂಖ್ಯೆ: ಹೆಚ್.ಡಿ/285/ಪಿಪಿಎಸ್/2024,</td></tr>
</table>

| | | |
|---|---|---|
| | ಸಿಬ್ಬಂದಿಗಳಿಗೆ ಮುಂಬಡ್ತಿ ಹುದ್ದೆಗಳು ಹಂಚಿಕೆ ಆಗಿಲ್ಲ. ಇದಕ್ಕೆ RPP ACT ಅನ್ವಯ ಆಗುವುದಿಲ್ಲ. 371(ಜೆ) ಪರಿಕಲ್ಪನೆ ಪೂರ್ವದಲ್ಲಿ ಜಾರಿ ಇರುವ ಈ KSCS RPP ACT ಇದ್ಕಕೆ ಅನ್ವಯಿಸಲು ಹೇಗೆ ಸಾಧ್ಯ: (ಸಂಪೂರ್ಣ ವಿವರಗಳೊಂದಿಗೆ ಮಾಹಿತಿ ನೀಡುವುದು) | ದಿನಾಂಕ:18/01/2025 ರಲ್ಲಿ ಹೆಚ್ಚುವರಿಯಾಗಿ ಮೀಸಲಿಸಿರುವ 27 ಹೆಚ್.ಸಿ ಹುದ್ದೆಗಳಿಗೆ ದಿನಾಂಕ:26/07/2019 ರಿಂದ ಪೂರ್ವಾನ್ವಯವಾಗಿ ಮುಂಬಡ್ತಿ ನೀಡುವ ಕುರಿತು The Karnataka State Civil Services (Regulation of Promotion Pay and Pension) Act 1973 ಸೆಕ್ಷನ್ 3ರನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ಮುಂಬಡ್ತಿಗಳು ಭವಿಷ್ಯವರ್ತಿಯಾಗಿ ಜಾರಿಗೆ ಬರುತ್ತವೆ. The Karnataka State Civil Services (Regulation of Promotion Pay and Pension) Rules 1978 ರ ನಿಯಮ 2ರಲ್ಲಿ ಪೂರ್ವಾನ್ವಯ ಮುಂಬಡ್ತಿ ನೀಡುವ ಪ್ರಕರಣಗಳನ್ನು ವಿವರಿಸಲಾಗಿರುತ್ತದೆ.<br><br>ಈ ಸಂದರ್ಭಗಳನ್ನು ಹೊರತುಪಡಿಸಿ ಇತರೆ ಸಂದರ್ಭಗಳಲ್ಲಿ ಪೂರ್ವಾನ್ವಯವಾಗಿ ಮುಂಬಡ್ತಿ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಮುಂಬಡ್ತಿಗೆ ರಿಕ್ತ ಸ್ಥಾನಗಳು ಲಭ್ಯವಿದ್ದವು ಎಂಬ ಮಾತ್ರಕ್ಕೆ ಪೂರ್ವಾನ್ವಯವಾಗಿ ಮುಂಬಡ್ತಿ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |
| ಈ) | ಹೈದರಾಬಾದ್ ಕರ್ನಾಟಕ ಮೀಸಲಾತಿ ಆದೇಶ 2013 KSCS RPP ACT 1973 ಅನ್ವಯಿಸುತ್ತದೆ ಎಂಬುದು ನಿಲುವು ಆಗಿದ್ದರೆ, KSCS RPP ACT 1973ರ ಸೆಕ್ಷನ್ 4 ರನ್ವಯ ಬಡ್ತಿಗಳು ಇತ್ಯಾದಿ ಹಂಚಿಕೆದಾರರು. ಸದರಿ ನಿಯಮದಲ್ಲಿ ವಿವರವಾಗಿ ಆಡಳಿತ ಕಛೇರಿಯಿಂದ ಆದ ತಪ್ಪುಗಳನ್ನು ಸರಿ ಮಾಡಲು ಅವಕಾಶಗಳು ಇದ್ದಾಗ ಅದರಂತೆ ಸರಿಪಡಿಸಲು ನಿರ್ದೇಶನ ಮಾಡದೇ ಇರಲು ಅಥವಾ ಕ್ರಮ ಕೈಗೊಳ್ಳದೇ ಇರಲು ಕಾರಣಗಳೇನು: | |
| ಉ) | ಹೈದರಾಬಾದ್ ಕರ್ನಾಟಕ ಮೀಸಲಾತಿ ಆದೇಶ 2013ರ ನಿಯಮಗಳಂತೆ ಹಾಗೂ KAT ಬೆಂಗಳೂರು ನ್ಯಾಯಾಲಯದ ಆದೇಶದಂತೆ KSISF ನಲ್ಲಿ HC ಹುದ್ದೆಗಳ ಪೂರ್ವ ಅನ್ವಯವಾಗಿ ಹಂಚಿಕೆ ಮಾಡಲು ಕಾನೂನು ಅಡಿ ಅವಕಾಶಗಳು ಇದ್ದಾಗ. KSCS RPP ACT 1973ರ ಸೆಕ್ಷನ್ 3 ರನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ಮುಂಬಡ್ತಿಗಳು ಭವಿಷ್ಯ ವರ್ತಿಯಾಗಿ ಜಾರಿಗೆ ಬರುತ್ತವೆ ಎಂದು ಆಕ್ಷೇಪಾರ್ಹ ನಿರ್ದೇಶನ ಮಾಡಲು ಕಾರಣಗಳೇನು: ಇದ್ದನ್ನು ತಿದ್ದುಪಡಿ ಮಾಡುವ ಕ್ರಮಗಳು ಮೇಲ್ಮನವಿ ಪ್ರಾಧಿಕಾರದ ಮುಂದೆ ಇದೆಯೇ? | |

**ಹೆಚ್ 219 ಪಿಹೆಚ್ಎಸ್ 2025**

(ಡಾ|| ಜಿ. ಪರಮೇಶ್ವರ)
ಗೃಹ ಸಚಿವರು